ಕರ್ನಾಟಕ ವಿಧಾನ ಸಭೆ

ಬೆಳಗಾವಿ ಅಧಿವೇಶನ

ಹದಿಮೂರನೇ ವಿಧಾನಸಭೆ

ಎರಡನೇ ಅಧಿವೇಶನ

ಮಂಗಳವಾರ ದಿನಾಂಕ 20 ನೇ ಜನವರಿ 2009 ರಂದು ಸದನವು ಬೆಳಗಾವಿಯ ಡಾ॥ ಬಿ.ಎಸ್.ಜೀರಿಗೆ ಹಾಲ್, ಜೆನ್ಎಂಸಿ ಮೆಮೋರಿಯಲ್ ಆಡಿಟೋರಿಯಮ್ನಲ್ಲಿ ಬೆಳಗಾವಿನಲ್ಲಿ ಬೆಳಿಗ್ಗೆ 10.45 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ/ಶ್ರೀಮತಿ ಜಗದೀಶ್ ಶೆಟ್ಟರ್ ರವರು ಪೀಠವನ್ನು ಅಲಂಕರಿಸಿದ್ದರು.

(ಸದನವು 10 ಗಂಟೆ 45 ನಿಮಿಷಕ್ಕೆ ಪ್ರಾರಂಭಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ :- ಮಾನ್ಯ ಸದಸ್ಯರಾದ ಶ್ರೀ ಬಿ.ಕೆ. ಸಂಗಮೇಶ್ವರ್ ಅವರಿಗೆ ರಕ್ಷಣೆ ಒದಗಿಸುವ ಬಗ್ಗೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ.ಕೆ.ಸಂಗಮೇಶ್ವರ್ ರವರು ಸದನದ ಬಾವಿಗೆ ಬಂದು " ನನಗೆ ನನ್ನ ಕ್ಷೇತ್ರದ ಜನತೆಗೆ ಸಮಾಜ ಘಾತುಕರಿಂದ ರಕ್ಷಿಸಿ" ಎಂದು ಬರೆದಿರುವ ಬ್ಯಾನರ್ ಪ್ರದರ್ಶಿಸುತ್ತಾ ಮಾತನಾಡುತ್ತಿದ್ದರು)

ಶ್ರೀ ನೆ.ಲ.ನರೇಂದ್ರಬಾಬು :- ಒಬ್ಬ ಶಾಸಕನಿಗೆ ರಕ್ಷಣೆ ಇಲ್ಲವೆಂದು ಹೇಳಿದ ಮೇಲೆ ಜನಸಾಮಾನ್ಯರಿಗೆ ಹೇಗೆ ರಕ್ಷಣೆ ಸಿಗುತ್ತದೆ? ಶಾಸಕರಿಗೆ ರಕ್ಷಣೆ ಇದ್ದರೆ ಜನಸಾಮಾನ್ಯರಿಗೂ ರಕ್ಷಣೆ ಇರುತ್ತದೆಂದು ಹೇಳುತ್ತೇನೆ. ಆ ಕ್ಷೇತ್ರದ ಶಾಸಕರಿಗೆ ರಕ್ಷಣೆ ಇಲ್ಲವೆಂದರೆ ಹೇಗೇ?

ಅಧ್ಯಕ್ಷರು :- ಮಾನ್ಯ ಸಂಗಮೇಶ್ವರ್ರವರೆ, ತಮ್ಮ ಸ್ಥಳಕ್ಕೆ ಹೋಗಿ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ತಾವು ಕೂಡ ಮಾನ್ಯ ಶಾಸಕರಿಗೆ ರಕ್ಷಣೆ ಕೊಡಬೇಕೆಂದು ನಾವು ಒತ್ತಾಯವನ್ನು ಮಾಡುತ್ತಿದ್ದೇವೆ. ಆ ವಿಷಯವನ್ನು ಸ್ವಲ್ಪ ಸಭೆಗೆ ತಿಳಿಸಿದರೆ ಅನುಕೂಲವಾಗುತ್ತದೆ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ :- ಮಾನ್ಯ ಅಧ್ಯಕ್ಷರೆ, ಶಾಸಕರಿಗೆ ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಲು ಹೇಳಿ.

ಅಧ್ಯಕ್ಷರು :- ಶಾಸಕರು ತಮ್ಮ ಸ್ಥಳಕ್ಕೆ ಹೋಗಿ. ಏನಾದರೂ ಮಾತನಾಡುವುದಾದರೆ ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ. ಆಮೇಲೆ ನಿಮ್ಮ ಶಾಸಕಾಂಗ ಪಕ್ಷದ ಉಪನಾಯಕರು ಒಂದು ಸಿಲುವಳಿ ಸೂಚನೆಯನ್ನು ಕಾನೂನು ಸುವ್ಯವಸ್ಥೆಯ ಬಗ್ಗೆ ಇವತ್ತು ಕಳುಹಿಸಿದ್ದಾರೆ. ನಿಮ್ಮ ವಿಷಯವನ್ನು ಅವರು ಪ್ರಸ್ತಾಪ ಮಾಡುತ್ತಾರೆ. ಆ ಸಂದರ್ಭದಲ್ಲಿ ನಿಮಗೂ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿದೆ. ಮಾನ್ಯ ಸದಸ್ಯರು ತಮ್ಮ ಸ್ಥಳಕ್ಕೆ ಹೋಗಿ, ಈ ರೀತಿ proceedings ನಡೆಸುವುದಕ್ಕೆ ಅನಾನುಕೂಲತೆಯನ್ನು ಸದಸ್ಯರು ಮಾಡಬಾರದು. ನಿಮಗೆ ಏನು ತೊಂದರೆಯಾಗಿದೆ ಅದನ್ನು ಪ್ರಸ್ತಾಪ ಮಾಡುವಾಗ ಹೇಳಿ. ಸರ್ಕಾರದ ಗಮನವನ್ನು ಸೆಳೆಯಿರಿ. ಸರ್ಕಾರ ಏನು ಆಶ್ವಾಸನೆಯನ್ನು ಕೊಡುತ್ತದೆ ಅದನ್ನು ಮಾಡೋಣ. ದಯವಿಟ್ಟು ತಾವು ತಮ್ಮ ಸ್ಥಳಕ್ಕೆ ಹೋಗಿ. ದಯವಿಟ್ಟು ನೀವು ಇಲ್ಲಿ ವೆಲ್‌ನಲ್ಲಿ ನಿಂತುಕೊಂಡು ಮಾತನಾಡುವುದಕ್ಕೆ ಹೋಗಬೇಡಿ. ನೀವು ಏನಾದರೂ ಮಾತನಾಡುವುದು ಇದ್ದರೆ ತಾವು ತಮ್ಮ ಸ್ಥಳಕ್ಕೆ ಹೋಗಿ. ನಿಮಗೆ ಏನಾದರೂ ತೊಂದರೆಯಾಗಿದ್ದರೆ, ಯಾರಿಂದಲಾದರು ನಿಮಗೆ ಹೆರಾಸ್‌ಮೆಂಟ್ ಆಗಿದ್ದರೆ ಅದರ ರಕ್ಷಣೆ ಕೊಡುವುದಕ್ಕೆ ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳಿ. ಸರ್ಕಾರ ರಕ್ಷಣೆಯನ್ನು ಕೊಡುತ್ತದೆ. ದಯವಿಟ್ಟು ವೆಲ್‌ಗೆ ಬಂದು ಮಾತನಾಡುವುದು ಸರಿಯಲ್ಲ. ಇಲ್ಲಿ ಚರ್ಚೆ ಮಾಡುವಂತಹದ್ದು, ಇದು ಸದನದ ಗೌರವಕ್ಕೆ ಧಕ್ಕೆ ಬರುತ್ತದೆ. ತಾವು ಮಾತನಾಡುವುದಾದರೆ ತಮ್ಮ ಸ್ಥಳಕ್ಕೆ ಹೋಗಿ ಮಾತನಾಡಿ. ನಿಮ್ಮ ಕಾಂಗ್ರೆಸ್ ನಾಯಕರು ಆ ಬಗ್ಗೆ ವಿಚಾರ ಮಾಡಬೇಕು.

(ಗೊಂದಲ)

ಅಧ್ಯಕ್ಷರು :- ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡುವಾಗ ತಾವು ಮಾತನಾಡಿ. ಮಾನ್ಯ ಸಂಗಮೇಶ್ವರ್‌ರವರು ಅವರ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಲು ನೀವು ಹೇಳಿ. ನೀವು ಮಾತನಾಡಿದ ನಂತರ ಬೇಕಾದರೆ ಅವರು ಮಾತನಾಡಲಿ.

(ಗೊಂದಲ)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :- ಮಾನ್ಯ ಅಧ್ಯಕ್ಷರೆ, ತಾವು ನನಗೂ ಕೂಡ ರಕ್ಷಣೆಯನ್ನು ಕೊಡಿಸಿ.

ಶ್ರೀ ಆರ್. ರೋಷನ್ ಬೇಗ್ :- ಒಬ್ಬ ಆಡಳಿತ ಪಕ್ಷದ ಶಾಸಕರಿಗೆ ರಕ್ಷಣೆ ಇಲ್ಲವೆಂದರೆ ಹೇಗೆ?

ಶ್ರೀ ಹೆಚ್.ಸಿ. ಬಾಲಕೃಷ್ಣ :- ಆಡಳಿತ ಪಕ್ಷದ ಶಾಸಕರಿಗೆ ರಕ್ಷಣೆ ಇಲ್ಲವೆಂದ ಮೇಲೆ ಈ ಸರ್ಕಾರ ಯಾವ ಶಾಸಕರಿಗೆ ರಕ್ಷಣೆಯನ್ನು ಕೊಡುತ್ತಾರೆ ಸ್ವಾಮಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಜಯಚಂದ್ರರವರೆ, ತಾವು ನಿಲುವಳಿ ಸೂಚನೆಯ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಸಂಗಮೇಶ್ವರವರ ವಿಚಾರವನ್ನು ಕೂಡ ತಾವು ಪ್ರಸ್ತಾಪ ಮಾಡಿದ್ದೀರಿ. ಅವರು ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳುವುದಕ್ಕೆ ಹೇಳಿ. ನೀವು ಮಾತನಾಡಿದ ನಂತರ ಅವರು ಕೂಡ ಮಾತನಾಡಲಿ. ಈ ನಿಲುವಳಿ ಸೂಚನೆಯಲ್ಲಿ ಆ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ಸಂಗಮೇಶ್ವರವರೆ ತಾವು ತಮ್ಮ ಸ್ಥಳಕ್ಕೆ ಹೋಗಿ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ಮಾನ್ಯ ಶಂಕರ ಲಿಂಗೇಗೌಡರಿಗೆ ರಕ್ಷಣೆಯನ್ನು ಕೊಡಬೇಕು.

ಅಧ್ಯಕ್ಷರು :- ಅವರು ಮಾತನಾಡುತ್ತಾರೆ. ಅವರ ಪರವಾಗಿ ಮಾನ್ಯ ಬಾಲಕೃಷ್ಣರವರೆ ನೀವು ಏತಕ್ಕಾಗಿ ಮಾತನಾಡುತ್ತೀರಿ? ಅವರು ಏನು ಹೇಳುತ್ತಾರೆಯೋ ಅದನ್ನು ಕೇಳೋಣ. ಮಾನ್ಯ ಸಂಗಮೇಶ್ವರ್‌ರವರೆ ತಾವು ತಮ್ಮ ಸ್ಥಳಕ್ಕೆ ಹೋಗಿ. ನಿಮಗೆ ಏನು ತೊಂದರೆಯಾಗಿದೆ ಎಂಬುದನ್ನು ಹೇಳಬೇಕಲ್ಲವೇ? ಈ ರೀತಿ ಮಾಡುವುದು ಸರಿಯಲ್ಲ. ಏನು ತೊಂದರೆಯಾಗಿದೆ ಅದನ್ನು ತಾವು ಹೇಳಬೇಕಲ್ಲವೇ? ಈ ರೀತಿಯಾಗಿ ಪ್ರತಿಭಟನೆಯನ್ನು ಮಾಡುವುದು ಸರಿಯಲ್ಲ. ಮಾನ್ಯ ಜಯಚಂದ್ರರವರೆ, ದಯವಿಟ್ಟು ನಿಮ್ಮ ಪಕ್ಷದ ಶಾಸಕರನ್ನು ಅವರ ಸ್ಥಳಕ್ಕೆ ಹೋಗಲು ಹೇಳಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ತಮ್ಮ ಮಾತನ್ನು ಕೇಳಬೇಕು. ಕೇಳದಿದ್ದರೆ ಅವರನ್ನು ದಯವಿಟ್ಟು ಹೊರಕ್ಕೆ ಕಳುಹಿಸಿ. ಸದನದ ಬಾವಿಯಲ್ಲಿ ನಿಂತು ಏನು ಬೇಕಾದರೂ ಮಾತನಾಡಬಹುದೇ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ಈ ಮನೆಯ ಗೌರವಾನ್ವಿತ ಸದಸ್ಯರಾಗಿರುವಂತಹ ಸಂಗಮೇಶ್ವರ್‌ರವರಿಗೆ ಪ್ರಾಣಕ್ಕೆ ಕುತ್ತು ಬಂದಂತಹ ಸಂದರ್ಭದಲ್ಲಿ.....

ಶ್ರೀ ಕೆ.ಎಸ್. ಈಶ್ವರಪ್ಪ :- ನೀವು ಮಾತನಾಡಿ ಸ್ವಾಮಿ.

ಶ್ರೀ ಟಿ.ಬಿ. ಜಯಚಂದ್ರ :- ಈ ಮನೆಯ ಒಳಗಡೆ ಯಾವುದೇ ರೀತಿಯಾಗಿ ಅವರು ತೋರಿಸಿದಂತಹ ಪ್ರತಿಭಟನೆಯನ್ನು ಮಾನ್ಯ ಸಭಾಧ್ಯಕ್ಷರ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಅವರಿಗೆ ರಕ್ಷಣೆ ಸಿಗದಿದ್ದರೆ ಅವರು ಎಲ್ಲಿಗೆ ಹೋಗಬೇಕು?

ಶ್ರೀ ಕೆ.ಎಸ್. ಈಶ್ವರಪ್ಪ :- ಸರ್ಕಾರ ರಕ್ಷಣೆ ಕೊಡುವುದಕ್ಕೆ ತಯಾರಿದೆ. ಈ ರೀತಿ ಧರಣಿಯನ್ನು ಕುಳಿತುಕೊಂಡರೆ ಹೇಗೆ?

ಅಧ್ಯಕ್ಷರು :- ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ. ಈ ರೀತಿ ಪ್ರತಿಭಟನೆಯನ್ನು ನಡೆಸುವುದು ಸರಿಯಲ್ಲ. Proceedingsಗೆ ತೊಂದರೆಯಾಗುತ್ತದೆ. ಸದನವನ್ನು ಸರಿಯಾದ ರೀತಿಯಲ್ಲಿ ನಡೆಸೋಣ. ಏನಾದರೂ ಹೇಳುವುದಿದ್ದರೆ ಮಾನ್ಯ ಶಾಸಕರು ತಮ್ಮ ಸ್ಥಳಕ್ಕೆ ಹೋಗಿ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಗೌರವಾನ್ವಿತ ಶಾಸಕರಾದ ಶ್ರೀ ಸಂಗಮೇಶ್ವರ್‌ರವರ ಪ್ರಾಣಕ್ಕೆ ಕುತ್ತು ಬಂದಂತಹ ಸಂದರ್ಭದಲ್ಲಿ ಅದನ್ನು ಯಾವ ರೀತಿಯಾಗಿ ಸರ್ಕಾರ ಸರಿಪಡಿಸುತ್ತೀರೆಂಬ ಬಗ್ಗೆ ಮಾನ್ಯ ಸದಸ್ಯರು ಸದನದ ಬಾವಿಗೆ ಬಂದು ಪ್ರತಿಭಟನೆಯನ್ನು ಮಾಡಿ ಮಾನ್ಯ ಸಭಾಧ್ಯಕ್ಷರ ಗಮನ ಸೆಳೆಯಲು ಪ್ರಯತ್ನಪಟ್ಟಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :- No, No, ಇದಕ್ಕೆ ದಯಮಾಡಿ ಅಲೋ ಮಾಡಬಾರದು. ವಿರೋಧ ಪಕ್ಷದ ಉಪ ನಾಯಕರು ಮಾತನಾಡುತ್ತಿದ್ದಾರೆ. ಅವರ ಪಕ್ಷದ ಸದಸ್ಯರು ಬಾವಿಯಲ್ಲಿ ಕುಳಿತು ಧರಣಿ ಮಾಡುತ್ತಿದ್ದಾರೆ. ಇದೆಂಥ ವ್ಯವಸ್ಥೆ? ಇದೇ ರೀತಿ ಮುಂದುವರೆಯುವುದಾದರೆ ನಾಳೆ ಎಲ್ಲರೂ ಇದನ್ನೇ ಮಾಡುತ್ತಾರೆ. ಈ ರೀತಿ ನಡೆಯುವುದಾದರೆ ಸಭಾಧ್ಯಕ್ಷರು ಏಕೆ ಬೇಕು? ಸರ್ಕಾರ ಏಕೆ ಬೇಕು? ನೀವು ಏಕೆ ಬೇಕು?

ಶ್ರೀ ಟಿ.ಬಿ. ಜಯಚಂದ್ರ :- ನಾನು ಸಭಾಧ್ಯಕ್ಷರಿಗೆ convince ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಅದಕ್ಕೆ ದಯವಿಟ್ಟು ಅವಕಾಶ ಕೊಡಿ.

ಶ್ರೀ ಕೆ.ಎಸ್. ಈಶ್ವರಪ್ಪ :- ಅವರನ್ನು ಎಬ್ಬಿಸಿ, ನನಗೆ ಗೊತ್ತಿಲ್ಲ ಅವರು ನಿಮ್ಮ ಮಾತನ್ನು ಕೇಳುತ್ತಾರೋ ಇಲ್ಲವೋ? ನಿಮ್ಮ ಮಾತನ್ನು ಅವರು ಕೇಳುವುದಾದರೆ ಅವರನ್ನು ಎಬ್ಬಿಸಿ ಮಾತನಾಡಿ. ಸಭಾಧ್ಯಕ್ಷರೇ, ಅವರು ಇಲ್ಲಿ ಕುಳಿತುಕೊಂಡಿರುವುದು, ಅವರು ಅಲ್ಲಿ ಮಾತನಾಡುತ್ತಿರುವುದು, ಇದೇನು ವ್ಯವಸ್ಥೆ ಇದು. ಅವರನ್ನು ಎಬ್ಬಿಸಿ ಮಾತನಾಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ನಾನು ಮಾನ್ಯ ಸಭಾಧ್ಯಕ್ಷರ ಗಮನ ಸೆಳೆಯಲಿಕ್ಕೆ ಪ್ರಯತ್ನ ಪಡುತ್ತಿದ್ದೇನೆ. ಮಾನ್ಯ ಸಚಿವರಿಗೆ ಗೌರವದಿಂದ ಹೇಳುವುದು ಏನೆಂದರೆ ಇಡೀ ಕರ್ನಾಟಕದ ...

ಅಧ್ಯಕ್ಷರು :- ಜಯಚಂದ್ರರವರೇ, ನಾನೇನು ಹೇಳಲಿಕ್ಕೆ ಇಷ್ಟಪಡುತ್ತೇನೆಂದರೆ ಇವತ್ತು ನೀವು ಕಾನೂನು ಸುವ್ಯವಸ್ಥೆ ಬಗ್ಗೆ ನಿಮ್ಮ ಶಾಸಕಾಂಗ ಪಕ್ಷದ ಪರವಾಗಿ ನೀವೆಲ್ಲರೂ signature ಮಾಡಿ ಇವತ್ತು ನಿಲುವಳಿ ಸೂಚನೆ ಕೊಟ್ಟಿದ್ದಾರೆ. Preliminary submission ಮಾಡಲು ತಯಾರಾಗಿದ್ದೀರಿ. ನಾನು ಅದಕ್ಕೂ ಅವಕಾಶವನ್ನು ಕೊಟ್ಟಿದ್ದೇನೆ. ಈಗ Question hour ಇದ್ದರೆ ಅದರ ನಂತರ ತೆಗೆದುಕೊಳ್ಳಬೇಕು ಎನ್ನುವುದು ಇರುತ್ತದೆ, ಈಗ ಇನ್ನೂ ಕೆಲವು Calling attention ಇವೆ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುವುದಿದೆ. ಇದರಲ್ಲಿ ಇವನ್ನೆಲ್ಲಾ ಪ್ರಸ್ತಾಪ ಮಾಡಬಹುದು. ಆದರೂ ಸಹ ನಿಲುವಳಿ ಸೂಚನೆಗೆ ಅವಕಾಶ ಕೊಟ್ಟಿದ್ದೇನೆ. preliminary submission ಮಾಡುತ್ತೇನೆಂದು ಹೇಳಿದ್ದೀರಿ. ಆ ಸಂದರ್ಭದಲ್ಲಿ ನಿಮ್ಮದೇ ಪಕ್ಷದ ಶಾಸಕರು ಇವತ್ತು

ನನಗೆ ಇಲ್ಲಿ ರಕ್ಷಣೆ ಇಲ್ಲವೆಂದು ಇಲ್ಲಿಗೆ ಬಂದಿದ್ದಾರೆ. ಸರ್ಕಾರಕ್ಕೆ ಗೊತ್ತಾಗಿದೆ, ಅವರು ಆ ವಿಷಯದಲ್ಲಿ ಮಾತನಾಡಲಿ. ಅವರು ತಮ್ಮ ಸ್ಥಳಕ್ಕೆ ಹೋಗಲಿ. ಅವರು ಬಾವಿಯಲ್ಲಿ ಕುಳಿತಿರುವುದು, ತಾವು ಮಾತನಾಡುವುದು ಸರಿಯಲ್ಲ. ಅವರನ್ನು ಅವರ ಸ್ಥಾನಕ್ಕೆ ಕಳುಹಿಸಿ, ಅವರು ಅಲ್ಲಿಯೇ ಮಾತನಾಡಲಿ.

ಶ್ರೀ ಟಿ.ಬಿ. ಜಯಚಂದ್ರ :- ನಾನು request ಮಾಡಿಕೊಳ್ಳುತ್ತೇನೆ. ಆರು ಕೋಟಿ ಜನಗಳ ಪ್ರತಿನಿಧಿಗಳ ಸಭೆಯಿದು.

ಶ್ರೀ ಕೆ.ಎಸ್.ಈಶ್ವರಪ್ಪ :- ನಿಮ್ಮ ಕಾಂಗ್ರೆಸ್ ಸದಸ್ಯರು ಸಭಾಧ್ಯಕ್ಷರ ಮಾತನ್ನು ಕೇಳುವ ಹಾಗಿಲ್ಲ. ನಿಮ್ಮ ಮಾತನ್ನು ಕೇಳುವ ಹಾಗಿಲ್ಲ. ಇವರು ಬಾವಿಯೊಳಗೆ ಕುಳಿತೇ ಇದ್ದಾರೆ. ನೀವು ಮಾತನಾಡುತ್ತಲೇ ಇದ್ದೀರಿ. ಇದು ಯಾವ ವ್ಯವಸ್ಥೆ? ಸಭಾಧ್ಯಕ್ಷರ ಮಾತು ಕೇಳುವ ಹಾಗಿಲ್ಲ. ನಿಮ್ಮ ಮಾತೂ ಕೇಳುವ ಹಾಗಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ಅವರು ಬೇರೇನೂ ಮಾಡುತ್ತಿಲ್ಲ. ಅವರು ಸಭಾಧ್ಯಕ್ಷರ ಎದುರಿನಲ್ಲಿ ಕುಳಿತಿದ್ದಾರೆ. ಅದೇನು ದೊಡ್ಡ ಪ್ರಮಾದ ಆಗುವುದಿಲ್ಲ. ದಯವಿಟ್ಟು ಅರ್ಥ ಮಾಡಿಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ :- ಅವರು ಧರಣಿ ಕುಳಿತಿರಬೇಕಾದರೆ ಇದು ಹಾಗೆ ಮುಂದುವರೆಯಬೇಕೇ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :- ಏನಾಗಿದೆ ಎಂಬ ಬಗ್ಗೆ ದಯವಿಟ್ಟು ಅರ್ಥ ಮಾಡಿಕೊಳ್ಳಿ. ಜನರಿಂದ ಆಯ್ಕೆಯಾಗಿರುವಂಥ ಶಾಸಕರು ಎಲ್ಲಿಗೆ ಹೋಗಬೇಕು. ಯಾವರೀತಿ ಅವರ ತೊಂದರೆಯನ್ನು ಹೇಳಿಕೊಳ್ಳಬೇಕು ಎಂಬುದು ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು :- ಇದೇನು ಹೊಸದಲ್ಲ. ಹೊಸದಾಗಿ ಹುಟ್ಟಿಕೊಂಡು ಬಂದಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :- ಸರ್ಕಾರ ಉತ್ತರ ಕೊಡಲಿಕ್ಕೆ ತಯಾರಿದೆ.

(ಗೊಂದಲ)

ಅಧ್ಯಕ್ಷರು :- ಸಂಗಮೇಶ್ವರ್‌ರವರು ನಿಮ್ಮ ಸ್ಥಳಕ್ಕೆ ಹೋಗಿ. ಒಳ್ಳೆಯ ರೀತಿಯಲ್ಲಿ ಸದನವನ್ನು ನಡೆಸಲಿಕ್ಕೆ ಅವಕಾಶ ಮಾಡಿಕೊಡಿ. ನಿಮ್ಮ ಸ್ಥಳಕ್ಕೆ ಹೋಗಿ. ನಿಮ್ಮ ಸ್ಥಳಕ್ಕೆ ಹೋಗಿ ನೀವು ಹೇಳಿ. ನಿಮ್ಮ ಸ್ಥಳಕ್ಕೆ ಹೋಗಿ ಅಲ್ಲಿ ನಿಮಗೇನು ತೊಂದರೆಯಾಗಿದೆ ಎಂಬ ಬಗ್ಗೆ ಹೇಳಿ.

ಮಾನ್ಯ ಸದಸ್ಯರೊಬ್ಬರು :- ನಿಮ್ಮ ಶಾಸಕರ ಮೇಲೆ ನಿಮಗೆ ಕಂಟ್ರೋಲ್ ಇಲ್ಲವೇ?

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಂಗಮೇಶ್ವರ್‌ರವರು ಬಾವಿಯಿಂದ ಅವರ ಸ್ವಸ್ಥಾನಕ್ಕೆ ತೆರಳಿದರು)

ಶ್ರೀ ಸುಭಾಷ್ ಗುತ್ತೇದಾರ್ :- ಅಧ್ಯಕ್ಷರೇ, ಆರು ಕೋಟಿ ಜನರಿಂದ ಆಯ್ಕೆಯಾಗಿರುವ ನಮಗೂ ಸಹ ಕೊಲೆ ಬೆದರಿಕೆ ಹಾಕಿದ್ದಾರೆ. ನಮಗೂ ರಕ್ಷಣೆಯ ಅಗತ್ಯವಿದೆ.

ಅಧ್ಯಕ್ಷರು :- ಗುತ್ತೇದಾರ್‌ರವರೇ ಜಯಚಂದ್ರರವರು ನಿಲುವಳಿ ಸೂಚನೆ ಕೊಟ್ಟಿದ್ದಾರೆ. ಅವರು ಮಾತನಾಡುತ್ತಿದ್ದಾರೆ, ಅವರು ಮಾತನಾಡಿದ್ದು ಮುಗಿಯಲಿ. ದಯವಿಟ್ಟು ಗುತ್ತೇದಾರ್‌ರವರೇ ಕುಳಿತುಕೊಳ್ಳಿ. ಸಂಗಮೇಶ್ವರ್‌ರವರೇ ದಯವಿಟ್ಟು ಕುಳಿತುಕೊಳ್ಳಿ. ಆಮೇಲೆ ನೀವು ಮಾತನಾಡಿ.

ಶ್ರೀ ಟಿ.ಬಿ. ಜಯಚಂದ್ರ :- ಸಭಾಧ್ಯಕ್ಷರೇ, ಆರು ಕೋಟಿ ಜನಗಳ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ಸದನಕ್ಕೆ 224 ಜನ ಸದಸ್ಯರು ಆಯ್ಕೆಯಾಗಿ ಬಂದಿದ್ದಾರೆ. ತಾವು ಇವತ್ತು ಎತ್ತರದ ಪೀಠದಲ್ಲಿ ಕುಳಿತಿದ್ದೀರಿ. ಬಹುಶ: ಈ ಸರ್ಕಾರ ಇರಬಹುದು, ಇವೆಲ್ಲವೂ ಕೂಡ ಸಭೆಯ ಅಧೀನ. ಇವತ್ತು ಸಭೆಯಿಂದ ಮೂಡಿ ಬಂದಿರುವುದು ಸರ್ಕಾರ. ಅವರ ಜೀವಕ್ಕೆ ರಕ್ಷಣೆ ಇಲ್ಲದಂತಹ ಸಂದರ್ಭ ಬಂದಾಗ, ಆ ರೀತಿಯಾಗಿ law and order failure ಆಗುವಂಥ ಸಂದರ್ಭದಲ್ಲಿ ನಾವು ಏನು ಮಾಡಬೇಕು? ಸದಸ್ಯರು ತಮಗೆ ಆಗಿರುವ ನೋವನ್ನು ತೋಡಿಕೊಳ್ಳಲಿಕ್ಕೆ ತಮ್ಮ ಮುಂದೆ ನಿಂತಿದ್ದಾರೆ. ತಾವು ಎತ್ತರದ ಸ್ಥಾನದಲ್ಲಿ ಕುಳಿತು ಇವತ್ತು ನ್ಯಾಯವನ್ನು ಕೊಡುತ್ತೀರಿ ಎಂದು ಅವರು ಆ ರೀತಿ ಮಾಡಿದ್ದಾರೆ ವಿನ: ಈ House ಅನ್ನು disturb ಮಾಡಬೇಕೆಂಬ ಪ್ರಶ್ನೆ ಅಲ್ಲ. ಸಭಾಧ್ಯಕ್ಷರ ಗಮನ

ಸೆಳೆಯುವ ಉದ್ದೇಶದಿಂದ ಇವತ್ತು ಮಾನ್ಯ ಸದಸ್ಯರು ಈ ರೀತಿ ಮಾಡಿದ್ದಾರೆ. ಕಳೆದ 8 ತಿಂಗಳಿನಿಂದ ಸುರಕ್ಷಿತ ಕರ್ನಾಟಕದ ನಿರ್ಮಾಣವೇ ನಮ್ಮ ಆದ್ಯತೆ. ಇದು ಬಿಜೆಪಿಯ ಗುರಿ, ಬಿಜೆಪಿಯೇ ಪರಿಹಾರ. ಇದನ್ನು ಹೇಳಿದವರು ಈ ಸದನದಿಂದ ಮೂಡಿ ಬಂದಂಥ ಸರ್ಕಾರ. ಸರ್ಕಾರದ ಘೋಷಣೆ ಅದು. ಆ ಘೋಷಣೆಯಲ್ಲಿ ನಾನು ಒಂದು ಮುಖ್ಯವಾಗಿರುವ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಹೊರಟಿರುವುದು ಎಂದು ಹೇಳಿದರೆ ಈ ಮನೆಯ ಅಧೀನದಲ್ಲಿರುವ ಸರ್ಕಾರ. ಇವತ್ತು ಯಾವುದೋ ಒಂದು ರೀತಿಯಲ್ಲಿ ಕರ್ತವ್ಯ ಲೋಪವಾಗಿರುವ ಸಂದರ್ಭದಲ್ಲಿ ಅಲ್ಲಿನ ನಡೆವಳಿಕೆಯಲ್ಲಿ ಆಗಿರುವಂಥ defaults ಅನ್ನು omissions and commissions ಆದಂಥ ಸಂದರ್ಭದಲ್ಲಿ ನಿಲುವಳಿ ಸೂಚನೆ ಮೂಲಕ ಇವತ್ತು ನಾವು ಈ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಇದೆ. ಚುನಾವಣೆಯಲ್ಲಿ ನಾವೆಲ್ಲರೂ ಕೂಡ contest ಮಾಡುತ್ತೇವೆ, ಗೆಲ್ಲುತ್ತೇವೆ. ಗೆದ್ದ ತಕ್ಷಣವೇ ತಹಸೀಲ್ದಾರ್ ಅಥವಾ Returning Officer ಕೊಡತಕ್ಕಂಥ ಸರ್ಟಿಫಿಕೇಟ್ ಅಂತಿಮವಾಗುವುದಿಲ್ಲ.

ಅಧ್ಯಕ್ಷರು :- ಜಯಚಂದ್ರರವರೇ ಈ ಎಲ್ಲ ವಿಷಯವನ್ನು ದಯವಿಟ್ಟು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಾಗ ಹೇಳಬಹುದಲ್ಲವೇ.

ಶ್ರೀ ಟಿ.ಬಿ. ಜಯಚಂದ್ರ :- ನಾನು ತಮ್ಮ ಮನಸ್ಸನ್ನು ಒಲಿಸಿ ಕೊಳ್ಳುವುದಕ್ಕೋಸ್ಕರ ಮಾತನಾಡುತ್ತಿದ್ದೇನೆ.

2. <u>ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ</u>

ವಿಷಯ :- ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ವೈಫಲ್ಯತೆ ಬಗ್ಗೆ.

ಅಧ್ಯಕ್ಷರು :- ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಇವೆಲ್ಲವನ್ನು detail ಆಗಿ ಚರ್ಚೆ ಮಾಡಬಹುದು. ನೀವು ಈಗ ಪ್ರಾರಂಭ ಮಾಡಿದ್ದೀರಿ. ಅದನ್ನೇ ಮುಂದೆ continue ಮಾಡಬಹುದು.

ಶ್ರೀ ಟಿ.ಬಿ. ಜಯಚಂದ್ರ :- ಅಧ್ಯಕ್ಷರೇ, ಏನಾಗಿದೆಯೆಂದರೆ, ನಿಲುವಳಿ ಸೂಚನೆ ಏಕೆ ಬಹಳ ಮುಖ್ಯವೆಂದರೆ, ಕಳೆದ 8 ತಿಂಗಳುಗಳಲ್ಲಿ ಈ ರಾಜ್ಯದಲ್ಲಿರುವ ಸರ್ಕಾರ ಯಾವ ರೀತಿಯಾಗಿ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಹಳಿ ತಪ್ಪಿದೆ, ಅದನ್ನು ಮತ್ತೆ ಹಳಿಗೆ ತರಬೇಕಾದರೆ ನಾವು ಏನು ಮಾಡಬೇಕಾಗುತ್ತದೆ? ಅಧ್ಯಕ್ಷರೇ ಒಂದು ಮುಖ್ಯವಾದಂಥ ವಿಚಾರ. ಇವತ್ತು ನಾವೆಲ್ಲಾ ಶಾಸಕರಾಗಿ ಈ